ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 30-01-2016

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಗ್ಲೋಬಲ್ ವೆಲ್‌ನೆಸ್ ಮೀಟ್ 2016<br>ಸಮಾವೇಶ ಸಭಾಂಗಣಗಳ<br>ಗುದ್ದಲಿಪೂಜೆ<br>ಶ್ರೀ ಯು.ಟಿ. ಖಾದರ್,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು | 31-1-2016<br>ಭಾನುವಾರ<br>ಬೆಳಗ್ಗೆ<br>11-30<br>ಗಂಟೆಗೆ | ಗಾಯತ್ರಿ ವಿಹಾರ,<br>ಅರಮನೆ ಮೈದಾನ,<br>ಬೆಂಗಳೂರು |
| 2 | ಗಣ ರಾಜ್ಯೋತ್ಸವ ಪೆರೇಡ್‌ನಲ್ಲಿ ಪ್ರಧಾನ ಮಂತ್ರಿಗಳ ಪ್ರಶಸ್ತಿಗಳ ವಿಜೇತ ಎನ್.ಸಿ.ಸಿ. ಬಾಲಕ ಬಾಲಕಿಯರ ತಂಡ ಕರ್ನಾಟಕ ಎಕ್ಸ್‌ಪ್ರೆಸ್ ರೈಲಿನಲ್ಲಿ ಬೆಂಗಳೂರಿಗೆ ಆಗಮನ<br>ಸ್ವಾಗತ:<br>ಶ್ರೀ ಸಿ. ರಾಜೀವ್,<br>ಡೆಪ್ಯುಟಿ ಡೈರೆಕ್ಟರ್ ಜನರಲ್,<br>ಕರ್ನಾಟಕ ಮತ್ತು ಗೋವಾ,<br><br>ಸಂಪರ್ಕ:<br><br>ಗ್ರೂಫ್ ಕ್ಯಾಪ್ಟನ್ ಎಂ. ಮುರುಗನ್,<br>ಕಮಾಂಡಿಂಗ್ ಆಫೀಸರ್,<br>ಮೊಬೈಲ್ 9483197947 | 31-1-2016<br>ಭಾನುವಾರ<br>ಮಧ್ಯಾಹ್ನ<br>1-40<br>ಗಂಟೆಗೆ | ನಗರ ಕೇಂದ್ರ ರೈಲು ನಿಲ್ದಾಣ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## WARM WELCOME TO REPUBLIC DAY CAMP CONTINGENT OF NCC CADETS OF KARNATAKA AND GOA AT BENGALURU CITY RAILWAY STATION ON 31 JAN 2016 BY KARNATAKA EXP.

**Bengaluru, Jan 30 (Karnataka Information)**

A total of 106 NCC cadets comprising of both girls and boys and four NCC Officers who participated in the Republic Day Camp at Delhi held from 01 Jan to 28 Jan 2016 arrived by **Karnataka Express** in the afternoon on **31 Jan 16 at 1340 hrs**. They were given a warm welcome at **Bangalore City Railway Station** by **Air Commodore C Rajeev Deputy** Director General (DDG) Karnataka and Goa Dte. During the interaction with the cadets, it emerged that inspite of cold weather conditions in Delhi, the cadets participated with great enthusiasm and vigour during the camp. They proved their worth that nothing can deter their will power and determination in achieving excellence in various competitions. It is matter of pride that the NCC Directorate (Kar & Goa) bagged the overall **Runners Up position** at the **National level**, for the **Prime Minister's Banner**.

**babu:km**

## ನವದೆಹಲಿಯ ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ಪ್ರಶಸ್ತಿ ವಿಜೇತ ರಾಜ್ಯದ ಎನ್.ಸಿ.ಸಿ. ತಂಡ ಜ. 31 ರಂದು ನಗರಕ್ಕೆ

**ಬೆಂಗಳೂರು, ಜನವರಿ 30 (ಕರ್ನಾಟಕ ವಾರ್ತೆ)**

ನವದೆಹಲಿಯಲ್ಲಿ ಜನವರಿ 1 ರಿಂದ 28 ರವರೆಗೆ ನಡೆದ ಗಣರಾಜ್ಯೋತ್ಸವ ಎನ್.ಸಿ.ಸಿ. ಶಿಬಿರದಲ್ಲಿ ಪಾಲ್ಗೊಂಡು, ನವದೆಹಲಿಯ ಜನವರಿ 26 ರ ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ಭಾಗವಹಿಸಿ ರಾಷ್ಟ್ರೀಯ ಮಟ್ಟದ ಪ್ರಧಾನ ಮಂತ್ರಿಗಳ ರನ್ನರ್ಸ್ ಆಪ್ (ಎರಡನೇ ಸ್ಥಾನ) ಪದಕ ಪಡೆದ ಕರ್ನಾಟಕ ರಾಜ್ಯ ಮತ್ತು ಗೋವಾ ಎನ್.ಸಿ.ಸಿ. ಬಾಲಕ ಮತ್ತು ಬಾಲಕಿಯರ ತಂಡಗಳು ಜನವರಿ 31 ರಂದು ಮಧ್ಯಾಹ್ನ 1.40 ಗಂಟೆಗೆ ಕರ್ನಾಟಕ ಎಕ್ಸ್‌ಪ್ರೆಸ್ ರೈಲಿನಲ್ಲಿ ಬೆಂಗಳೂರಿನ ಸಿಟಿ ರೈಲ್ವೆ ನಿಲ್ದಾಣಕ್ಕೆ ಆಗಮಿಸಲಿದೆ.

ಈ ತಂಡವನ್ನು ಕರ್ನಾಟಕ ಮತ್ತು ಗೋವಾ ಎನ್.ಸಿ.ಸಿ. ಮುಖ್ಯಸ್ಥ ಹಾಗೂ ಡೆಪ್ಯುಟಿ ಡೈರೆಕ್ಟರ್ ಜನರಲ್ ಏರ್ ಕಮಾಡೋರ್ ಸಿ ರಾಜೀವ್ ಸ್ವಾಗತಿಸಿ, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುವರು. ಪ್ರಶಸ್ತಿ ವಿಜೇತ ತಂಡವನ್ನು ಸ್ವಾಗತಿಸಲು ಸಾರ್ವಜನಿಕರು, ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಲು ಕೋರಿದೆ.

ಅಲ್ಲದೆ, ಪ್ರಶಸ್ತಿ ವಿಜೇತ ಎನ್.ಸಿ.ಸಿ. ತಂಡವು ಫೆಬ್ರವರಿ 3 ರಂದು ಸಂಜೆ 6-00 ಗಂಟೆಗೆ ಬೆಂಗಳೂರು ವಿಧಾನಸೌಧದಲ್ಲಿ ರಾಜ್ಯದ ಮುಖ್ಯಮಂತ್ರಿಗಳನ್ನು ಭೇಟಿಮಾಡಲಿದೆ. ಫೆಬ್ರವರಿ 4 ರಂದು ಸಂಜೆ 6-00 ಗಂಟೆಗೆ ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನ ಸಭಾಂಗಣದಲ್ಲಿ ಕರ್ನಾಟಕ ಮತ್ತು ಗೋವಾ ಎನ್.ಸಿ.ಸಿ. ಹಾಗೂ ಡೆಪ್ಯುಟಿ ಡೈರೆಕ್ಟರ್ ಜನರಲ್‌ರಿಂದ ಪ್ರಶಸ್ತಿ ವಿಜೇತ ಎನ್.ಸಿ.ಸಿ. ತಂಡಕ್ಕೆ ಸನ್ಮಾನವನ್ನು ಏರ್ಪಡಿಸಲಾಗಿದೆ ಎಂದು ಕರ್ನಾಟಕ ಮತ್ತು ಗೋವಾ ಎನ್‌ಸಿಸಿ ಕಛೇರಿ ಪ್ರಕಟಣೆ ತಿಳಿಸಿದೆ.

ಬಾಬು:ಕೆಎಂ

# ವಾರ್ತಾ ಇಲಾಖೆಯಲ್ಲಿ ಹುತಾತ್ಮರಿಗೆ ನಮನ

**ಬೆಂಗಳೂರು, ಜನವರಿ 30 (ಕರ್ನಾಟಕ ವಾರ್ತೆ)**

ಬೆಂಗಳೂರಿನ ವಾರ್ತಾಸೌಧದಲ್ಲಿರುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕೇಂದ್ರ ಕಚೇರಿಯಲ್ಲಿ ಇಂದು ಬೆಳಿಗ್ಗೆ ಹುತಾತ್ಮರ ದಿನದ ಅಂಗವಾಗಿ ಇಲಾಖೆಯ ಕೇಂದ್ರ ಭಾಗದಲ್ಲಿರುವ " ಗಾಂಧಿ ಅಂಗಳ " ದಲ್ಲಿ ಮಹಾತ್ಮ ಗಾಂಧಿಯವರ ಪ್ರತಿಮೆ ಬಳಿ ಹುತಾತ್ಮರಿಗೆ ಗೌರವಪೂರ್ವಕವಾಗಿ ನಮನ ಸಲ್ಲಿಸಿ ಮೌನಾಚರಣೆ ಮಾಡಲಾಯಿತು.

ಇಲಾಖೆಯ ನಿರ್ದೇಶಕ ಎನ್. ಆರ್. ವಿಶುಕುಮಾರ್ ಅವರು ಗಾಂಧಿ ಪ್ರತಿಮೆಗೆ ಖಾದಿ ಮಾಲೆ ಸಮರ್ಪಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ದೇಶದಾದ್ಯಂತ ಇಂದು ಸ್ವಾತಂತ್ರ್ಯಕ್ಕಾಗಿ ತ್ಯಾಗ ಬಲಿದಾನ ಗೈದವರ ನೆನಪಿನಲ್ಲಿ ಹುತಾತ್ಮ ದಿನ ಆಚರಿಸುತ್ತಿದ್ದೇವೆ. ನಮಗೆ ಸ್ವಾತಂತ್ರ್ಯ ತಂದುಕೊಡುವಲ್ಲಿ ಅವರ ತ್ಯಾಗ ಬಲಿದಾನಗಳು ನೆನಪಿಸಿಕೊಂಡು ಅವರಿಗೆ ಗೌರವ ಸಲ್ಲಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಇಲಾಖೆಯ ಜಂಟಿ ನಿರ್ದೇಶಕರಾದ ಎಂ. ರವಿಕುಮಾರ್, ಪಿ. ಎನ್. ಗುರುಮೂರ್ತಿ, ಹಿರಿಯ ಉಪ ನಿರ್ದೇಶಕ ಹೆಚ್. ಬಿ. ದಿನೇಶ್ ಹಾಗೂ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಮೌನಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಮೌನಾಚರಣೆ ಮೊದಲು "ಸುಮಿರನ ಕರಲೆ ಮೇರೆ ಮನ್" ವೈಷ್ಣವ ಜನತೋ ತೇನೇ ಕಹಿಯೇ" ಮತ್ತು "ರಘುಪತಿ ರಾಘವ ರಾಜಾರಾಂ" – ಗಾಂಧಿ ಪ್ರಿಯ ಭಜನೆಗಳನ್ನು ಹಾಡಲಾಯಿತು.

ಬಾಬು:ಜಿಪಿಆರ್

# ಕರ್ನಾಟಕ ಒನ್ ಕೇಂದ್ರಗಳ ಕೆಲಸದ ವೇಳೆ ಬದಲಾವಣೆ

ಬೆಂಗಳೂರು, ಜನವರಿ 30 (ಕರ್ನಾಟಕ ವಾರ್ತೆ)

**ರಾಜ್ಯದ ಎಲ್ಲಾ ಕರ್ನಾಟಕ ಒನ್ ಕೇಂದ್ರಗಳ (ಬೆಳಗಾವಿ ಒನ್, ಬಳ್ಳಾರಿ ಒನ್, ದಾವಣಗೆರೆ ಒನ್, ಗುಲ್ಬರ್ಗಾ ಒನ್, ಹುಬ್ಬಳ್ಳಿ–ಧಾರವಾಡ ಒನ್, ಮಂಗಳೂರು ಒನ್, ಮೈಸೂರುಒನ್, ಶಿವಮೊಗ್ಗ ಒನ್ ಮತ್ತು ತುಮಕೂರು ಒನ್) ಕೆಲಸದ ವೇಳೆ ದಿನಾಂಕ: 01–01–2016 ರಿಂದ ಬದಲಾವಣೆಯಾಗಿದ್ದು, ಕರ್ನಾಟಕ ಒನ್ ಕೇಂದ್ರಗಳು ಮೊದಲನೆಯ ಶಿಫ್ಟ್‌ನಲ್ಲಿ ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನ 1–30 ಗಂಟೆವರೆಗೆ ಹಾಗೂ ಎರಡನೇಯ ಶಿಫ್ಟ್‌ನಲ್ಲಿ ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 7–00 ಗಂಟೆವರೆಗೆವರ್ಷದ ಎಲ್ಲಾದಿನಗಳೂ ಕಾರ್ಯನಿರ್ವಹಿಸುವವು (ಸ್ವತಂತ್ರ ದಿನಾಚರಣೆ, ಗಣರಾಜ್ಯೋತ್ಸವ ಮತ್ತು ಚುನಾವಣೆ ಮತ ಚಲಾಯಿಸುವ ದಿನ ಹೊರತುಪಡಿಸಿ)**

**ನಾಗರಿಕರು ಈ ಬದಲಾವಣೆಯನ್ನು ಪರಿಗಣಿಸಿ ಕರ್ನಾಟಕ ಒನ್ ಕೇಂದ್ರಗಳಲ್ಲಿ ಸೇವೆಯನ್ನು ಪಡೆಯಲು ಕೋರಲಾಗಿದೆ.**

ಬಾಬು:ಜಿಪಿಆರ್

# Changes in the Working Hours of Karnataka One Centres.

Bangalore January 30 (Karnataka Information)

**This is to inform that Working Hours of all Karnataka One Centres (Belagavi One, Ballari One, Davangere One, Gulbarga One, Hubballi-Dharwad One, Mangalore One, Mysuru One, Shivamoga One and Tumkuru One) has been changed and with effect from 01-01-2016, the first shift will work between 8-00 AM to1-30PM and the second shift will work between 2-00 PM to7-00 PM on all days in a year excluding Independence Day, Republic Day and on election voting Days.**

**Citizens are requested to make note of changes in the timings and accordingly avail the services of Karnataka one Centres**.

**babu:gpr**

## ಹೋಂ ಕೇರ್ ನರ್ಸಿಂಗ್ ತರಬೇತಿ ಶಿಬಿರ

ಬೆಂಗಳೂರು, ಜನವರಿ 30 (ಕರ್ನಾಟಕ ವಾರ್ತೆ)

**ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು 18 ರಿಂದ 35 ವರ್ಷದ ಯುವತಿಯರಿಗಾಗಿ ಸ್ವಯಂ ಉದ್ಯೋಗ ಯೋಜನೆಯಡಿ ಹೋಂ ಕೇರ್ ನರ್ಸಿಂಗ್ ತರಬೇತಿಯನ್ನು ಫೆಬ್ರವರಿ 11 ರಿಂದ 25 ರವರೆಗೆ ಬೆಂಗಳೂರಿನ ನೃಪತುಂಗ ರಸ್ತೆಯ, ರಾಜ್ಯ ಯುವ ಕೇಂದ್ರದಲ್ಲಿ ಏರ್ಪಡಿಸಿದೆ. ನೋಂದಣಿ ಶುಲ್ಕ 500 ರೂ.ಗಳಾಗಿದ್ದು ಆಸಕ್ತ ಯುವತಿಯರು ತಮ್ಮ ಜನ್ಮ ದಿನಾಂಕದ ದಾಖಲೆಯಾದ ಎಸ್.ಎಸ್. ಎಲ್.ಸಿ.**

ಅಂಕಪಟ್ಟಿಯೊಡನೆ ಇಲಾಖೆಯ ಅಂತರ್ಜಾಲದಲ್ಲಿ ಹೆಸರು ನೋಂದಾಯಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಅಂತರ್ಜಾಲ www,karnatakayouthportal.in ಹಾಗೂ ದೂರವಾಣಿ ಸಂಖ್ಯೆ 080– 22214911 ನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಬಾಬು/ಕೆಎಂ

# ಸಂತಾಪ

ಬೆಂಗಳೂರು, ಜನವರಿ 30 (ಕರ್ನಾಟಕ ವಾರ್ತೆ)

ಶಿಕ್ಷಣ ತಜ್ಞ ಬಿ.ಎಸ್.ವಿ. ಸುಬ್ರಮಣ್ಯ ಅವರ ನಿಧನಕ್ಕೆ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಖಾತೆ ರಾಜ್ಯ ಸಚಿವ ಶ್ರೀ ದಿನೇಶ್ ಗುಂಡೂರಾವ್ ಅವರು ಸಂತಾಪ ವ್ಯಕ್ತಪಡಿಸಿದ್ದಾರೆ.
ಬಾಬು/ಕೆಎಂ

# ಸಾರ್ವಜನಿಕ ಸಾರಿಗೆಗೆ ಒತ್ತು ನೀಡಿಕೆ

ಬೆಂಗಳೂರು, ಜನವರಿ 30 (ಕರ್ನಾಟಕ ವಾರ್ತೆ)

ಬೆಂಗಳೂರಿನಲ್ಲಿ ದಿನೆ ದಿನೇ ವಾಹನಗಳ ಸಂಖ್ಯೆ ಅಧಿಕವಾಗುತ್ತಿದ್ದು ಈಗ ಸುಮಾರು 54 ಲಕ್ಷ ವಾಹನಗಳು ರಸ್ತೆಯಲ್ಲಿ ಸಂಚರಿಸುತ್ತಿವೆ. ರಸ್ತೆಯಲ್ಲಿನ ಸಾರಿಗೆ ದಟ್ಟಣೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಹಾಗೂ ಅದನ್ನು ಮಿತಿಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ ಎಂದು ಭೂ ಸಾರಿಗೆ ನಿರ್ದೇಶನಾಲಯದ ಆಯುಕ್ತರಾದ ಡಾ: ವಿ. ಮಂಜುಳಾ ಅವರು ತಿಳಿಸಿದರು.

ಅವರು ಇಂದು ತಮ್ಮ ಕಛೇರಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ, ನಗರದಲ್ಲಿನ ಸಾರಿಗೆ ದಟ್ಟಣೆಯನ್ನು ಕಡಿಮೆ ಮಾಡುವ ಉದ್ದೇಶದಿಂದ "ತೆರೆದ ಬೀದಿ" (Open Street) ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ. ಇದರ ಹಿನ್ನೆಲೆಯಲ್ಲಿ ಪಾದಚಾರರಿಗೆ ನಡಿಗೆ, ಸೈಕಲ್ ಸವಾರಿ ಹಾಗೂ ಸಾರ್ವಜನಿಕರ ಸಾರಿಗೆ ಬಳಕೆಗೆ ಹೆಚ್ಚು ಉತ್ತೇಜನ ನೀಡಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ತೆರೆದ ಬೀದಿ ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಫೆಬ್ರವರಿ 14 ರಂದು ಎಂ.ಜಿ. ರಸ್ತೆಯಲ್ಲಿ ನಡೆಸಲು ಉದ್ದೇಶಿಸಲಾಗಿದೆ. ಅನಿಲ್ ಕುಂಬ್ಳೆ ವೃತ್ತದಿಂದ ಬ್ರಿಗೇಡ್ ರಸ್ತೆಯ ವರೆಗೆ ಅಂದು ಬೆಳಿಗ್ಗೆ 9–00 ಗಂಟೆಯಿಂದ ರಾತ್ರಿ 9–00 ಗಂಟೆಯವರೆಗೆ ಪ್ರಾಯೋಗಿಕವಾಗಿ ನಡೆಸಲಾಗುವುದು. ಮೇಲ್ಕಂಡ ಅವಧಿಯಲ್ಲಿ ಆ ರಸ್ತೆಯಲ್ಲಿ ಸಣ್ಣ ಪುಟ್ಟ ಸಾಂಸ್ಕೃತಿಕ ಕಾರ್ಯಕ್ರಮಗಳು, ಆಟೋಟಗಳನ್ನು, ಸಣ್ಣ ಪುಟ್ಟ ವ್ಯಾಪಾರಿ ಮಳಿಗೆಗಳನ್ನು ತೆರೆಯಲಾಗುವುದು. ಇದರ ನೋಂದಣಿಗಾಗಿ ಫೆಬ್ರವರಿ 4 ರಿಂದ ಇಲಾಖೆಯಲ್ಲಿ ವ್ಯವಸ್ಥೆ ಮಾಡಲಾಗಿದೆ. ನೋಂದಣಿ ಮಾಡಿಸುವವರು ಇಲಾಖೆಯ ಗ್ರಾಹಕ ಸಂಪರ್ಕ ಅಧಿಕಾರಿ ಪಿ.ವಿ. ಮಂಜುನಾಥ್ ಅವರನ್ನು ಅಥವಾ ಅವರ ಮೊಬೈಲ್ ಸಂಖ್ಯೆ 95911 00445 ಸಂಪರ್ಕಿಸಬಹುದಾಗಿದೆ ಎಂದು ಡಾ: ಶ್ರೀಮತಿ ಮಂಜುಳಾ ತಿಳಿಸಿದರು.
ಬಾಬು/ಕೆವಿನ್ವಿ/ಕೆಎಂ